

ಭಾರತೀಯ ಕುಟುಂಬಗಳು ತಮ್ಮ ಸಾಮರ್ಥ್ಯ ಮೀರಿ ಮದುವೆಗೆ ಖರ್ಚು ಮಾಡುತ್ತವೆ ಎನ್ನುವುದರ ಬಗ್ಗೆ ಸಮೀಕ್ಷೆ ಪ್ರಕಟವಾಗಿರುವ ಸಂದರ್ಭದಲ್ಲೇ, ವಿಶ್ವದ ಗಮನಸೆಳೆಯುವ ಅತಿ ಅದ್ದೂರಿ ಮದುವೆಯೊಂದಕ್ಕೆ ಭಾರತ ಸಾಕ್ಷಿಯಾಗಿದೆ. ಜನಸಾಮಾನ್ಯರು ಬೆರಗಿನಿಂದ ನೋಡುವಂತಹ ದುಬಾರಿ ವೆಚ್ಚದ ಮದುವೆಗಳು ಸುದ್ದಿ ಸ್ವಾರಸ್ಯಕ್ಕೆ ಹಾಗೂ ಹಣದ ಚಲನೆಗೆ ಅವಕಾಶ ಕಲ್ಪಿಸಬಹುದೇ ಹೊರತು, ಸಮಾಜಕ್ಕೆ ಮಾದರಿಯಾಗಲಾರವು. ಈ ದುಬಾರಿ ಮದುವೆಗಳಿಗೆ ಪರ್ಯಾಯವಾಗಿ ಸರಳ ಹಾಗೂ ಅರ್ಥಪೂರ್ಣ ವಿವಾಹದ ಕೆಲವು ಮಾದರಿಗಳು ನಮ್ಮ ನಡುವೆಯಿವೆ. ಮದುವೆಯ ಪರಿಕಲ್ಪನೆಗೆ ಘನತೆ ತಂದುಕೊಡುವ ಕೆಲವು ಸರಳ ಮದುವೆ ಮಾದರಿಗಳ ಪರಿಚಯ ಈ ಸಂಚಿಕೆಯ ‘ಸುಧಾ’ ವಿಶೇಷ.

■ ರಾಘವೇಂದ್ರ ಕೆ. ತೊಗರ್ಸಿ

# ಹಣದ ವೈಭವ, ಮಂತ್ರ, ಸಂಪ್ರದಾಯದ ಹಂಗಿಲ್ಲದೆ ಮದುವೆಯನ್ನು ಕಾನೂನುಬದ್ಧ ಮಾಡುವುದು ಸರಳ